## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೆ. ಹರೀಶ್ ಕುಮಾರ್ ಇವರು ನಿಯಮ-72ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

**ಪ್ರಶ್ನೆ:**

ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ರೈತರು ಹಾಗೂ ಬೆಳೆಗಾರರ ತರಬೇತಿ ಸಲುವಾಗಿ ಬೆಳ್ತಂಗಡಿ ತಾಲ್ಲೂಕಿನಲ್ಲಿ ಸ್ಥಾಪಿಸಲಾದ ಏಕೈಕ ಕೃಷಿ ತರಬೇತಿ ಕೇಂದ್ರವು ಸಿಬ್ಬಂದಿ ಕೊರತೆ ಹಾಗೂ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳಿಂದಾಗಿ ನಿಸ್ತೇಜಗೊಂಡಿರುವ ಕುರಿತು ನಿಯಮ 72ರ ಅಡಿಯಲ್ಲಿ ಮಾನ್ಯ ಕೃಷಿ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ**:

ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಬೆಳ್ತಂಗಡಿ ಕಛೇರಿಗೆ ಒಟ್ಟು 14 ವಿವಿಧ ಹುದ್ದೆಗಳು ಮಂಜೂರಾಗಿದ್ದು, 11 ಹುದ್ದೆಗಳು ಖಾಲಿ ಇರುತ್ತವೆ. ಪ್ರಸ್ತುತ ಈ ತರಬೇತಿ ಕೇಂದ್ರದಲ್ಲಿ ಒಬ್ಬ ಸಹಾಯಕ ಕೃಷಿ ನಿರ್ದೇಶಕರು, ಒಬ್ಬ ಅಧೀಕ್ಷಕರು ಹಾಗೂ ಒಬ್ಬ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳು ಮಾತ್ರ ಭರ್ತಿಯಾಗಿರುತ್ತವೆ. ಆದಾಗ್ಯೂ ಅಧಿಕಾರಿಗಳನ್ನು ಹೆಚ್ಚಿನ ಪ್ರಭಾರದಲ್ಲಿರಿಸಿ ತರಬೇತಿ ಕಾರ್ಯಗಳಿಗೆ ಅಡಚಣೆಯಾಗದಂತೆ ಕ್ರಮ ವಹಿಸಲಾಗಿದೆ. ಮುಂದುವರೆದು, 100 ಕೃಷಿ ಅಧಿಕಾರಿ ಮತ್ತು 650 ಸಹಾಯಕ ಕೃಷಿ ಅಧಿಕಾರಿಗಳ ಹುದ್ದೆಗಳನ್ನು ತುಂಬಲು ಆರ್ಥಿಕ ಇಲಾಖೆಯ ಸಹಮತಿ ದೊರೆತಿದ್ದು, ನೇರ ನೇಮಕಾತಿ ಮೂಲಕ ಹುದ್ದೆಗಳನ್ನು ತುಂಬಲು ಕ್ರಮ ವಹಿಸಲಾಗುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ರೈತರು/ರೈತ ಮಹಿಳೆಯರಿಗೆ ತರಬೇತಿ ನೀಡಲು ಅವಶ್ಯಕವಿರುವ ಬೋಧನಾ ಕೊಠಡಿ, ವಸತಿ ನಿಲಯ, ಭೋಜನಾಲಯ ಇತ್ಯಾದಿ ಎಲ್ಲಾ ಮೂಲ ಸೌಕರ್ಯಗಳು ಇರುತ್ತವೆ. 2023-24ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗೆ ಒಟ್ಟು ರೂ.11.67 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ರೂ.7.21 ಲಕ್ಷಗಳ ಅನುದಾನ ಬಳಕೆ ಮಾಡಿಕೊಂಡು 1077 ರೈತರಿಗೆ ನೀರಾವರಿ ಮೂಲಗಳು ಮತ್ತು ನೀರಿನ ಸಂರಕ್ಷಣೆ, ರಸಾವರಿ, ಇಂಧನ ಕ್ಷಮತೆಯ ಪಂಪ್‌ಸೆಟ್‌ಗಳ ಆಯ್ಕೆ ಮತ್ತು ಬಳಕೆ, ಸಾವಯವ ಕೃಷಿ, ತೋಟಗಾರಿಕೆ, ಮೀನುಗಾರಿಕೆ, ಜೇನುಕೃಷಿ, ಪಿ.ಎಂ.ಕಿಸಾನ್ ಇತ್ಯಾದಿ ವಿಷಯಗಳ ಕುರಿತು ಒಂದು ದಿನದ 6 ಸಾಂಸ್ಥಿಕ ತರಬೇತಿ, 11 ಹೊರಾಂಗಣ ತರಬೇತಿ, 2 ಆನ್‌ಲೈನ್ ತರಬೇತಿಗಳನ್ನು ಏರ್ಪಡಿಸಲಾಗಿದೆ ಮತ್ತು 39 ರೈತರಿಗೆ ಮೂಡಿಗೆರೆ ಕೃಷಿ ವಿಜ್ಞಾನ ಕೇಂದ್ರ, ಶಿವಮೊಗ್ಗ ಪಶುವೈದ್ಯಕೀಯ ಕಾಲೇಜು, ಚಿಕ್ಕಮಗಳೂರು ಜಿಲ್ಲೆಯ ಪ್ರಗತಿಪರ ರೈತರ ತಾಕುಗಳಿಗೆ ಮೂರು ದಿನಗಳ ಅಧ್ಯಯನ ಪ್ರವಾಸವನ್ನು ಕೈಗೊಳ್ಳಲಾಗಿದೆ. ಉಳಿದ ಅನುದಾನದಲ್ಲಿಯೂ ಸಹ ವರ್ಷಾಂತ್ಯದ ಒಳಗೆ ತರಬೇತಿಯನ್ನು ಹಮ್ಮಿಕೊಳ್ಳಲು ಕ್ರಮವಹಿಸಲಾಗಿದೆ. ಮುಂದಿನ ದಿನಗಳಲ್ಲಿ ಅನುದಾನ ಲಭ್ಯತೆಗನುಗುಣವಾಗಿ ಹೆಚ್ಚುವರಿ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತದೆ. ಜಿಲ್ಲಾ ಕೃಷಿ ತರಬೇತಿ ಕೇಂದ್ರದ ನೂತನ ಕಟ್ಟಡ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ.

**(ಎನ್. ಚೆಲುವರಾಯಸ್ವಾಮಿ)**
ಕೃಷಿ ಸಚಿವರು